ಕರ್ನಾಟಕಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/23/2016–17. ದಿನಾಂಕ:22–08–2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಹರಿಜನ ಚೌಡಪ್ಪ ತಂದೆ ಲೇಟ್ ಕೊಲ್ಲಾರಪ್ಪ<br>2)ಹರಿಜನ ಬಂಜಿಗೇರಿ ಬಸಮ್ಮ ಗಂಡ ಲೇಟ್ ಓಬಯ್ಯ<br>ಹಿರೇಕುಂಬಳಕುಂಟೆ ಗ್ರಾಮ ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ಹಿರೇಕುಂಬಳಕುಂಟೆ ಗ್ರಾಮದ ಸನಂ 436ಎ/2ಪೈಕಿ. ವಿಸ್ತೀರ್ಣ 3–00. ಎಕ್ರೆ ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹಿರೇಕುಂಬಳಕುಂಟೆ ಗ್ರಾಮದ ಸನಂ 436ಎ/2ಪೈಕಿ. ವಿಸ್ತೀರ್ಣ 3–00. ಎಕ್ರೆ ಜಮೀನನ್ನು ಸದರಿ ಗ್ರಾಮದ ಹರಿಜನ ಬಂಜಿಗೇರಿ ಬಸಮ್ಮ ಗಂಡ ಲೇಟ್ ಓಬಯ್ಯ ಇವರಿಂದ ಸದರಿ ಗ್ರಾಮದ ಹರಿಜನ ಚೌಡಪ್ಪ ತಂದೆ ಲೇಟ್ ಕೊಲ್ಲಾರಪ್ಪ ಇವರು ದಿನಾಂಕ 24–06–2016 ರ ಡಾಕ್ಯುಮೆಂಟ್ ನಂಬರ್: 1182/2016–17. ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹಿರೇಕುಂಬಳಕುಂಟೆ ಇವರು ನಮೂನೆ–21 ನೋಟಿಸನ್ನು ದಿನಾಂಕ 27–06–2016. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ವಿಕ್ರಯದಾರರು ನಮೂನೆ–21 ಕ್ಕೆ ಸಹಿ ಮಾಡಿಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 36/2016–17. ದಿನಾಂಕ 28–07–2016. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 12–08–2016. ರಿಂದ 22–08–2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಹಿರೇಕುಂಬಳಕುಂಟೆ ಗ್ರಾಮದ ಸನಂ 436ಎ/2ಪೈಕಿ. ವಿಸ್ತೀರ್ಣ 3–00. ಎಕ್ರೆ ಜಮೀನನ್ನು ಸದರಿ ಗ್ರಾಮದ ಹರಿಜನ ಬಂಜಿಗೇರಿ ಬಸಮ್ಮ ಗಂಡ ಲೇಟ್ ಓಬಯ್ಯ ಇವರಿಂದ ದಿನಾಂಕ 24–06–2016 ರ ಡಾಕ್ಯುಮೆಂಟ್ ನಂಬರ್: 1182/2016–17. ರ ಪ್ರಕಾರ ರೂ:1.83.000/– ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತೇನೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಸದರಿ ಜಮೀನಿನ ಬಗ್ಗೆ ಯಾವುದೇ ವಿವಾದ ಇಲ್ಲದಿರುವುದು ಕಂಡು ಬಂದ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

ಪು.ತಿ.ನೋ–2

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹಿರೇಕುಂಬಳಕುಂಟೆ ಗ್ರಾಮದ ಸನಂ 436ಎ/2ಪೈಕಿ. ವಿಸ್ತೀರ್ಣ 3–00. ಎಕ್ರೆ ಜಮೀನನ್ನು ದಿನಾಂಕ 24–06–2016 ರ ಡಾಕ್ಯುಮೆಂಟ್ ನಂಬರ್: 1182/2016–17. ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಹರಿಜನ ಚೌಡಪ್ಪ ತಂದೆ ಲೇಟ್ ಕೊಲ್ಲಾರಪ್ಪ ಹಿರೇಕುಂಬಳಕುಂಟೆ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 22–08–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಹರಿಜನ ಚೌಡಪ್ಪ ತಂದೆ ಲೇಟ್ ಕೊಲ್ಲಾರಪ್ಪ. ಹರಿಜನ ಬಂಜಿಗೇರಿ ಬಸಮ್ಮ ಗಂಡ ಲೇಟ್ ಓಬಯ್ಯ ಹಿರೇಕುಂಬಳಕುಂಟೆ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಹೊಸಹಳ್ಳಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.